# ‘ಟವರ್’ ಭಾಗ್ಯದ ನಿರೀಕ್ಷೆಯಲ್ಲಿ ಸೀತಾಪುರದ ಗುಡ್ಡ

ಐದು

ಸಂಜಯ್ ಸ್ನಾನ ಮುಗಿಸಿ ದೋಸೆ ತಿಂದು ಹೊರಗೆ ಬರುವಾಗ ಆನಂದಣ್ಣ ಶಾಸ್ತ್ರಿಗಳ ಮನೆಗೆ ಬಂದು ಕಾದುಕೊಂಡಿದ್ದರು. ಶಾಸ್ತ್ರಿಗಳು ಆನಂದಣ್ಣನನ್ನು ನೋಡಿ, ‘ಇದೇನು ಆನಂದಣ್ಣ, ಬೆಳಗ್ಗೆಯೇ ಬಂದಿದ್ದೀರಿ... ಹಿಂದೆ ಸಂಜಯನನ್ನು ಕರ್ಕೊಂಡು ಹೋಗ್ಲಿಕ್ಕೆ ನಾನು ಹೇಳ್ಬೇಕಿತ್ತು. ಈಗ ನೀವಾಗಿಯೇ ಬಂದಿದ್ದೀರಿ’ ಅಂದರು ನಗುತ್ತಾ.

ಆನಂದಣ್ಣ ಶಾಸ್ತ್ರಿಗಳಿಗೆ ಕೈಮುಗಿಯುತ್ತಾ, ‘ನಮಸ್ಕಾರ ಶಾಸ್ತ್ರಿಗಳೇ, ನೀವು ಹೇಳಿದ್ದು ಸರಿ... ನೀವು ಹೇಳುವಾಗ ನನಗೆ ಇವರು ಎಷ್ಟು ದೊಡ್ಡ ಜನ ಅಂತ ಗೊತ್ತಿರ್ಲಿಲ್ಲ. ಅದರಲ್ಲೇ ನಿಮ್ಮ ಮತ್ತು ನನ್ನ ನಡುವೆ ವ್ಯತ್ಯಾಸ. ನೀವು ಹಿರಿಯರು. ನಿಮಗೆ ಗಿಡದ ಎಲೆ ನೋಡಿದರೆ ಅದು ಯಾವ ಗಿಡ ಮತ್ತೆ ಯಾವ ಕಾಯಿಲೆಗೆ ಆಗ್ತದೆ ಅಂತ ಗೊತ್ತಾಗ್ತದೆ. ನಮ್ಮಂತಹ ಅಜ್ಞಾನಿಗಳಿಗೆ ಆ ಎಲೆಯನ್ನು ಜಗಿದ ಮೇಲೂ ಗೊತ್ತಾಗುವುದಿಲ್ಲ’ ಅಂದರು.

ಅದಕ್ಕೆ ಶಾಸ್ತ್ರಿಗಳು, ‘ಇವನನ್ನು ಕರ್ಕೊಂಡು ಹೋಗುವುದಕ್ಕೆ ತೊಂದರೆ ಇಲ್ಲ. ಆದರೆ ಅವನಿಗೆ ಅದು ಇದು ತಿನ್ನಿಸಬೇಡಿ. ನೆನ್ನೆ ಅವನ ಹೊಟ್ಟೆ ಹಾಳಾಗಿತ್ತು. ಮಧ್ಯಾಹ್ನದ ಊಟದ ವೇಳೆಗೆ ಮನೆಗೆ ಕರ್ಕೊಂಡು ಬಂದ್ರೆ ಒಳ್ಳೆಯದು’ ಅಂದ್ರು.

ಆನಂದಣ್ಣ ತಲೆಯಾಡಿಸಿದರು. ಸಂಜಯ್ ಶಾಸ್ತ್ರಿಗಳ ಕಡೆ ನೋಡಿ ಸ್ವಲ್ಪ ಮುಜುಗರದಲ್ಲೇ ‘ಮಧ್ಯಾಹ್ನ ಬರ್ತೇನೆ’ ಅಂದ. ಇಬ್ಬರೂ ಶೆಟ್ಟರ ಮನೆಗೆ ಹೊರಟರು. ಸೀತಾಪುರದ ಬಗೆಗಿನ ಆಲೋಚನೆಯಲ್ಲಿ ಇಬ್ಬರಿಗೂ ಶೆಟ್ಟರ ಮನೆ ಬಂದದ್ದು ಗೊತ್ತೇ ಆಗಲಿಲ್ಲ. ಶೆಟ್ಟರು ಮನೆಯಂಗಳದಲ್ಲೇ ಸಂಜಯ್ ಬರುವುದನ್ನು ಕಾಯುತ್ತಿದ್ದರು.

ಸಂಜಯನನ್ನು ನೋಡಿ, ‘ಬನ್ನಿ ಬನ್ನಿ ಕಾರಂತರೇ, ನಿಮಗೇ ಕಾಯುತ್ತಿದ್ದೆ’ ಅಂದರು.

ಮನೆಯಂಗಳದಲ್ಲಿ ಮೇಜು ಮತ್ತು ಅದರ ಸುತ್ತಲೂ ಮೂರು ಕುರ್ಚಿ ಹಾಕಲಾಗಿತ್ತು. ಬೇಸಗೆಯ ಸೆಕೆಗಾಗಿ ಒಂದು ಫ್ಯಾನೂ ತಿರುಗುತ್ತಿತ್ತು. ಸಂಜಯ್ ಶುರುಮಾಡಿದ.

‘ನೋಡಿ ಶೆಟ್ರೇ, ನಾನು ನಿನ್ನೆಯ ನಂತರ ತುಂಬಾ ಆಲೋಚನೆ ಮಾಡಿದ್ದೇನೆ, ಹೇಗೆ ಇದನ್ನು ಮುಂದುವರೆಸುವುದು ಅಂತ. ನನಗೊಂದು ಪೇಪರ್ ಕೊಡಿ’ ಅಂದ.

ಶೆಟ್ಟರು ಮನೆಯ ಹುಡುಗನಿಗೆ ಜೋರಾಗಿ ಕೂಗಿ ಪೇಪರ್ ತರಿಸಿಕೊಂಡರು. ಸಂಜಯ್

